**ದಿನಾಂಕ: 01.10.2021 ರಂದು ಸಮಯ 10.30 ಗಂಟೆಗೆ ವಾರ್ಡ್ 154–ಬಸವನಗುಡಿ ವಾರ್ಡಿಗೆ ಸಂಬಂಧಿಸಿದಂತೆ ವಿವಿದ್ದೋದ್ದೇಶ ಕಟ್ಟಡದಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು**

## ಹಾಜರಿದ್ದವರು

1. ಶ್ರೀ. ಮಂಜುನಾಥ ರೆಡ್ಡಿ, ವಾರ್ಡ್ ನೋಡಲ್ ಅಧಿಕಾರಿ ಹಾಗೂ ಅಧ್ಯಕ್ಷರು ವಾರ್ಡ್ 154
2. ಶ್ರೀ. ಗಿರೀಶ , ಸಹಾಯಕ ಅಭಿಯಂತರರು, ವಾರ್ಡ್ ಸಂಖ್ಯೆ 154 ಹಾಗೂ ಸದಸ್ಯ ಕಾರ್ಯದರ್ಶಿ
3. ಶ್ರೀ. ಹೇಮಂತ್ ಕುಮಾರ್. ಕೆ.ಹೆಚ್, ಹಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ 154
4. ಶ್ರೀ. ಬಾಲಕೃಷ್ಣ. ಎನ್, ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್–154.
5. ಶ್ರೀ. ಮುನಿರಾಜು ಕೆ., ಕಿರಿಯ ಅಭಿಯಂತರರು, BESCOM ವಾರ್ಡ್ 154
6. ಶ್ರೀ. ಎನ್. ನಾರಾಯಣ, ಕಂದಾಯ ಪರಿವೀಕ್ಷಕರು, ವಾರ್ಡ್ 154
7. ಶ್ರೀ. ಗೋಪಾಲಕೃಷ್ಣ, ಕಂದಾಯ ವಸೂಲಿಗಾರರು ವಾರ್ಡ್ 154
8. ಶ್ರೀ. ರಮೇಶ್ ಅರಿಸಿಕೆರಿ, Water Inspector, ಬಿ.ಡಬ್ಲ್ಯೂ.ಎಸ್.ಎಸ್.ಬಿ ವಾರ್ಡ್–154
9. ಶ್ರೀ.ಸದಾನಂದ, ಪೋಲೀಸ್ ಬಸವನಗುಡಿ ಸಂಚಾರಿ ಠಾಣೆ

ಸಭೆಯಲ್ಲಿ ಉಪಸ್ಥಿತರಿದ್ದ ವಾರ್ಡ್ ಅಧಿಕಾರಿಗಳಿಗೆ ಸ್ವಾಗತವನ್ನು ಕೋರುತ್ತಾ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ನೋಡಲ್ ಅಧಿಕಾರಿ ಹಾಗೂ ವಾರ್ಡ್ ಅಧ್ಯಕ್ಷರಾದ ಶ್ರೀ ಮಂಜುನಾಥ ರೆಡ್ಡಿ ರವರು ಪ್ರತಿ ತಿಂಗಳ ಮೊದಲನೇ/ಮೂರನೇ ಶನಿವಾರ ನಡೆಸಬೇಕೆಂದು ತಿಳಿಸುತ್ತ ಸಭೆಯಲ್ಲಿ ಉಪಸ್ಥಿತರಿರುವ ಅಧಿಕಾರಿಗಳನ್ನು ಸ್ವಾಗತಿಸುತ್ತಾ ಈ ಕೆಳಕಂಡ ವಾರ್ಡ್ ಸಮಸ್ಯೆಗಳ ಬಗ್ಗೆ ಚರ್ಚಿಸಲಾಯಿತು.

ನೋಡಲ್ ಅಧಿಕಾರಿಗಳು ಮಾತನಾಡಿ ಅಂಬಾ ಭವಾನಿ ದೇವಸ್ಥಾನದ ರಸ್ತೆಯಲ್ಲಿ ಖಾಲಿ ಇರುವ ತಳ್ಳುವ ಗಾಡಿಗಳನ್ನು ನಿಲ್ಲಿಸಿದ್ದು ಅದನ್ನು ನಿಲ್ಲಿಸಿರುವ ಸ್ಥಳದಿಂದ ತೆರವುಗೊಳಿಸಲು ಸೂಚಿಸಿರುತ್ತಾರೆ.

**ಕ್ರಮ: ವಾರ್ಡಿನ ಹಿರಿಯ ಆರೋಗ್ಯ ಪರಿವೀಕ್ಷಕರು ರವರಿಗೆ ಕ್ರಮ ವಹಿಸಲು ಸೂಚಿಸಿರುತ್ತಾರೆ**

ನೋಡಲ್ ಅಧಿಕಾರಿಗಳು ಮಾತನಾಡಿ ವಾರ್ಡ್ ವ್ಯಾಪ್ತಿಯಲ್ಲಿ ಫುಟ್‌ಪಾತ್ ಅಭಿವೃದ್ಧಿ ಕಾಮಗಾರಿಗೆ ಸಂಬಂಧಿಸಿದಂತೆ ವಾರ್ಡ್ ವ್ಯಾಪ್ತಿಯಲ್ಲಿ ಪರಿವೀಕ್ಷಣೆ ಮಾಡಿ ತುರ್ತಾಗಿ ಕೈಗೊಳ್ಳಬೇಕಾಗುವ ಫುಟ್‌ಪಾತ್ ಅಭಿವೃದ್ಧಿ ಕಾಮಗಾರಿಗಳು ಯಾವುದಾದರೂ ಇದ್ದರೆ ಶೀಘ್ರವಾಗಿ ವರದಿ ಸಲ್ಲಿಸಲು ಸೂಚಿಸಿರುತ್ತಾರೆ.

**ಕ್ರಮ: – ಸಹಾಯಕ ಅಭಿಯಂತರರು ವಾರ್ಡ್–154**
**ರವರಿಗೆ ಕ್ರಮ ವಹಿಸಲು ಸೂಚಿಸಿರುತ್ತಾರೆ.**

ನೋಡಲ್ ಅಧಿಕಾರಿಗಳು ಮಾತನಾಡಿ ವಾರ್ಡ್ ವ್ಯಾಪ್ತಿಯಲ್ಲಿ ಬರುವ ಶೌಚಾಲಯ ಅಭಿವೃದ್ಧಿ ಹಾಗೂ ಹೊಸದಾಗಿ ಯಾವುದಾದರೂ ಶೌಚಾಲಯ ನಿರ್ಮಾಣ ಮಾಡುವ ಅವಶ್ಯಕತೆ ಕುರಿತು ತಪಾಸಣೆ ಮಾಡಿ ವರದಿ ನೀಡಲು ಈ ಮೂಲಕ ಕೋರಲಾಗಿದೆ.

**ಕ್ರಮ: – ಹಿರಿಯ/ಸಹಾಯಕ ಆರೋಗ್ಯ ಪರಿವೀಕ್ಷಕರು ವಾರ್ಡ್–154**
**ರವರಿಗೆ ಕ್ರಮ ವಹಿಸಲು ಸೂಚಿಸಿರುತ್ತಾರೆ.**

ನೋಡಲ್ ಅಧಿಕಾರಿಗಳು ಮಾತನಾಡಿ ವಾರ್ಡ್ ಸುಬ್ಬರಾಮಚೆಟ್ಟಿ ರಸ್ತೆಯಲ್ಲಿ ಹಾಕಿರುವ ಬ್ಯಾನರ್‌ಗಳನ್ನು ತೆರವುಗೊಳಿಸಲು ಶೀಘ್ರವಾಗಿ ಕ್ರಮಕೈಗೊಳ್ಳಲು ಸೂಚಿಸಲಾಗಿದೆ.

**ಕ್ರಮ:- ಸಹಾಯಕ ಅಭಿಯಂತರರು, ವಾರ್ಡ್ 154**

ನೋಡಲ್ ಅಧಿಕಾರಿಗಳು ಮಾತನಾಡಿ ಕಾಂಕ್ರೀಟ್ ರಸ್ತೆಯಾದ ಸನ್ನಿಧಿ ರಸ್ತೆಯು ತುಂಬ ಹಾಳಾಗಿದ್ದು ಅಲ್ಲಿನ ನಿವಾಸಿಗಳು ಸದರಿ ರಸ್ತೆಯನ್ನು ದುರಸ್ಥಿ ಗೊಳಿಸಲು ಮನವಿ ಮಾಡಿರುತ್ತಾರೆ ಆದುದರಿಂದ ಸದರಿ ರಸ್ತೆಯನ್ನು ಅಭಿವೃದ್ಧಿ ಪಡಿಸಲು ಶೀಘ್ರವಾಗಿ ಕ್ರಮಕೈಗೊಳ್ಳಲು ಸೂಚಿಸಿರುತ್ತಾರೆ.

**ಕ್ರಮ: - ಸಹಾಯಕ ಅಭಿಯಂತರರು ವಾರ್ಡ್-154**
**ರವರಿಗೆ ಕ್ರಮ ವಹಿಸಲು ಸೂಚಿಸಿರುತ್ತಾರೆ.**

ನೋಡಲ್ ಅಧಿಕಾರಿಗಳು ಮಾತನಾಡಿ ಸಿಟಿ ಬೆಡ್‌ನಲ್ಲಿ ಬೃಹತ್ ಮಳೆನೀರು ಗಾಲುವೆ ದುರಸ್ತಿ ಕಾಮಗಾರಿ ನಡೆಯುತ್ತಿದ್ದು ಸದರಿ ಮಳೆನೀರು ಗಾಲುವೆಯ ಪಕ್ಕದಲ್ಲಿ ರಸ್ತೆಯು ಕುಸಿದಿರುತ್ತದೆ ಆದುದರಿಂದ ಸದರಿ ಭಾಗವನ್ನು ತುಂಬಿ ಕಾಂಕ್ರೀಟ್ ಹಾಕಿಕೊಡಲು ಸಾರ್ವಜನೀಕರು ವಿನಂತಿಸಿರುತ್ತಾರೆ ಆದುದರಿಂದ ಸದರಿ ದರಸ್ತಿ ಕಾರ್ಯವನ್ನು ಶೀಘ್ರವಾಗಿ ಕೈಗೊಳ್ಳಲು ಸೂಚಿಸಿರುತ್ತಾರೆ.

**ಕ್ರಮ: - ಸಹಾಯಕ ಕಾರ್ಯಪಾಲಕ ಅಭಿಯಂತರರು**
**ಬೃಹತ್ ಮಳೆನೀರು ಗಾಲುವೆ (ದಕ್ಷಿಣ) ರವರಿಗೆ ಕ್ರಮ ವಹಿಸಲು ಸೂಚಿಸಿರುತ್ತಾರೆ.**

ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

AE 154

ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿ
ವಾರ್ಡ್ ಸಂಖ್ಯೆ 154-ಬಸವನಗುಡಿ

<u>ಪ್ರತಿಯನ್ನು:</u>

1) **ಮಾನ್ಯ ಆಯುಕ್ತರು ರವರ ಆಪ್ತ ಶಾಖೆಗೆ ಅವಗಾಹನೆಗೆ ತರಲು ಕಳುಹಿಸಿದೆ.**
2) ವಲಯ ಆಯುಕ್ತರು (ದಕ್ಷಿಣ) ರವರ ಅವಗಾಹನೆಗೆ.
3) ಜಂಟಿ ಆಯುಕ್ತರು (ದಕ್ಷಿಣ) ರವರ ಅವಗಾಹನೆಗೆ.
4) ಮುಖ್ಯ ಅಭಿಯಂತರರು (ದಕ್ಷಿಣ) ರವರ ಅವಗಾಹನೆಗೆ,
5) ಕಾರ್ಯಪಾಲಕ ಅಭಿಯಂತರರು (ಬಸವನಗುಡಿ) /ಸ.ಕಾ.ನಿ.ಅ (ಬ.ಗು) ಉಪವಿಭಾಗ ರವರ ಅವಗಾಹನೆಗೆ.
6) ಆರೋಗ್ಯ ವೈದ್ಯಾಧಿಕಾರಿಗಳು, ಬಸವನಗುಡಿ ವಿಭಾಗ ರವರ ಅವಗಾಹನೆಗೆ.
7) **ಪೋಲೀಸ್ ಇನ್ಸ್‌ಪೆಕ್ಟರ್**, ಬಸವನಗುಡಿ ಕಾನೂನು ಸುವ್ಯವಸ್ಥೆ **ಪೋಲೀಸ್ ಠಾಣೆ** ರವರ ಅವಗಾಹನೆಗೆ.
8) ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಬಿಡಬ್ಲ್ಯೂಎಸ್‌ಎಸ್‌ಬಿ, ಎಂ.ಎನ್.ಕೆ ಪಾರ್ಕ್, ಬಸವನಗುಡಿ ರವರ ಅವಗಾಹನೆಗೆ.
9) ಸಂಬಂಧಪಟ್ಟ ಅಧಿಕಾರಿಗಳಿಗೆ ಹಾಗೂ ಮುಂದಿನ ಕ್ರಮಕ್ಕಾಗಿ.
10) ಕಛೇರಿ ಕಡತಕ್ಕೆ.